# ಗೋವಿಂದಾ ನಿನ್ನಾನಂದ ಸಕಲ ಸಾಧನವು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 232.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 234.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The Wordings in Ref. 2 are same as in Ref. 1.
5. **Note:** Singer has followed these lyrics (given without highlights). But, few singers have followed the wordings given in yellow highlights.

ರಾಗ: ಮಧ್ಯಮಾವತಿ ತಾಳ: ಆದಿ

ಗೋವಿಂದಾ ನಿನ್ನಾನಂದ ಸಕಲ ಸಾಧನವು ॥ ಪ ॥ (ಗೋವಿಂದಾ ನಿನ್ನ ನಾಮವೆ ಚಂದ)

ಅಣುರೇಣು ತೃಣ ಕಾಷ್ಟ ಪರಿಪೂರ್ಣ ಗೋವಿಂದ
ನಿರ್ಮಲಾತ್ಮಕನಾಗಿ ಇರುವುದೆ ಆನಂದ ॥ 1 ॥

ಸೃಷ್ಟಿ ಸ್ಥಿತಿ ಲಯ ಕಾರಣ ಗೋವಿಂದ
ಈ ಪರಿ ಮಹಿಮೆಯ ತಿಳಿಯುವುದೆ ಆನಂದ ॥ 2 ॥

ಮಂಗಳ ಮಹಿಮ ಶ್ರೀ ಪುರಂದರ ವಿಠ್ಠಲನ (ಪರಮ ಪುರುಷ ಶ್ರೀ ಪುರಂದರ ವಿಟ್ಠಲನ )
ಹಿಂಗದೆ ದಾಸರ ಸಲಹುವುದೆ ಆನಂದ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಿನ್ನಾನಂದ ಸಕಲ ಸಾಧನವೊ** – ‘ಲೋಕವತ್ತು ಲೀಲಾಕೈವಲ್ಯಂ’ ಎನ್ನುವ ಸೂತ್ರ ವಾಕ್ಯದ ವಿವರಣೆ. ಪರಮಾತ್ಮನು ಆಪ್ತಕಾಮನಾದುದರಿಂದ ಸೃಷ್ಟಿಗೆ ಕಾರಣವನ್ನು ಲೀಲೆಯೆಂದೇ ಹೇಳುತ್ತಾರೆ. ಲೀಲೆಯಲ್ಲಿ ಆನಂದಾನುಭವವು ಮುಖ್ಯವಾದುದು. ಈ ಆನಂದದಿಂದಲೇ ಸೃಷ್ಟಿ, ಸ್ಥಿತಿ, ಸಂಹಾರ, ಅಜ್ಞಾನ, ಜ್ಞಾನ, ಬಂಧ, ಮುಕ್ತಿಗಳೆಂಬ ಅಷ್ಟಮಹಾಕಾರ್ಯಗಳು ಜರುಗುವುವು. ಇವೇ ‘ಸಕಲಸಾಧನ’. ಆನಂದ ಅವನ ಸ್ವರೂಪಭೂತವಾದ ಗುಣ.

**ಅಣುರೇಣು...** – ಅವನು ಸರ್ವವ್ಯಾಪಿ; ಅತ್ಯಂತಸೂಕ್ಷ್ಮವಾದ ಜಡಪ್ರಕೃತಿಯ ವಿವರಗಳಲ್ಲೂ ತುಂಬಿದ್ದಾನೆ. ಆದರೆ ಯಾವ ವಿವರದಿಂದಲೂ ಅವನ ಸ್ವರೂಪ ಕೆಡುವುದಿಲ್ಲ. ಬ್ರಹ್ಮಾಂಡದ ವ್ಯಾಪಾರದಿಂದ ಅವನಲ್ಲಿ ವಿಕಾರವಿರದು (ನಿರ್ಮಲಾತ್ಮಕ).

**ಈ ಪರಿ ಮಹಿಮೆಯ...** – ಮಹಾತ್ಮ್ಯಜ್ಞಾನದಿಂದ ಜೀವರಿಗೆ ಯೋಗ್ಯತಾನುಸಾರವಾಗಿ ಆನಂದದ ಅನುಭವ.

**ಹಿಂಗದೆ** – ಬೇಸರಿಸದೆ, ಕುಂದದೆ.

**Classification:** Keerthane
**Ankita:** sri purandara vittala
**Location:** NA
**Category:** Krishna Stuti, srinivasa stuti
**Sub-Category:** govinda, Ananda, aNu, truNa, purNa, Nirmala, atma, mangala,
**Pravachana:** NA
**Explanation:** NA